# 4

# “ಏಳು, ಬಾಪ್ತಿಸ್ಮ ಮಾಡಿಸಿಕೋ”

# (1)

ಹಿಂದಿನ ಪಾಠಕ್ಕೆ ಪೀಠಿಕೆಯಾಗಿ “ನಾವು ರಕ್ಷಿಸಲ್ಪಡ ಬೇಕಾದರೆ ಏನು ಮಾಡಬೇಕು?” ಎಂದು ವ್ಯಕ್ತಿಗಳು ಪ್ರಶ್ನೆ ಕೇಳಿದ್ದನ್ನು ಹೇಳಲಾಗಿದೆ. ಪ್ರತಿಯೊಂದರ ಉತ್ತರದಲ್ಲಿಯೂ ಬಾಪ್ತಿಸ್ಮ ಕೂಡಿಸಲ್ಪಟ್ಟಿದೆ. “ಸಹೋದರರೇ, ನಾವು ಏನು ಮಾಡ ಬೇಕು?” (ಅಪೊಸ್ತಲರ ಕೃತ್ಯ 2:37) ಎಂದು ಯೆಹೂದ್ಯರು ಕೇಳಿದಾಗ, “ನಿಮ್ಮಲ್ಲಿ ಪ್ರತಿಯೊಬ್ಬರೂ ಮಾನಸಾಂತರಪಟ್ಟು, ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ಯೇಸು ಕ್ರಿಸ್ತನ ನಾಮದಲ್ಲಿ ಬಾಪ್ತಿಸ್ಮ ತೆಗೆದು ಕೊಳ್ಳಿರಿ. ಆಗ ನೀವು ಪರಿಶುದ್ಧಾತ್ಮ ವರವನ್ನು ಹೊಂದುವಿರಿ” (ಅಪೊಸ್ತಲರ ಕೃತ್ಯ 2:38) ಎಂದು ಪೇತ್ರನು ಉತ್ತರ ಕೊಟ್ಟನು. “ಕರ್ತನೇ, ನಾನೇನು ಮಾಡಬೇಕು?” (ಅಪೊಸ್ತಲರ ಕೃತ್ಯ 22:10) ಎಂದು ಸೌಲನು ಕೇಳಿದಾಗ, ಅವನು ಪಟ್ಟಣದೊಳಗೆ ಕಳುಹಿಸಲ್ಪಟ್ಟನು. ಅಲ್ಲಿ ಒಬ್ಬ ಪ್ರಸಂಗಿಯು ಬಂದು, “ಈಗ ನೀನು ತಡಮಾಡುವುದು ಯಾಕೆ? ಎದ್ದು, ಆತನ ಹೆಸರನ್ನು ಕರೆದು ಬಾಪ್ತಿಸ್ಮವನ್ನು ಹೊಂದಿ ನಿನ್ನ ಪಾಪಗಳನ್ನು ತೊಳೆದುಕೋ” ಅಂದನು (ಅಪೊಸ್ತಲರ ಕೃತ್ಯ 22:16). “ಅಯ್ಯಗಳಿರಾ, ನಾನು ರಕ್ಷಣೆ ಹೊಂದುವದಕ್ಕೆ ಏನು ಮಾಡ ಬೇಕು?” (ಅಪೊಸ್ತಲರ ಕೃತ್ಯ 16:30) ಎಂದು ಸೆರೆಮನೆಯ ಅಧಿಕಾರಿ ಕೇಳಿದಾಗ, ನಂಬಿಕೆಯಿಡು ಎಂದು ಅವನಿಗೆ ಹೇಳಲಾಯಿತು (ಅಪೊಸ್ತಲರ ಕೃತ್ಯ 16:31). ಅವನಿಗೂ ಅವನ ಕುಟುಂಬದವರಿಗೂ ದೇವರವಾಕ್ಯವು ಬೋಧಿಸಲ್ಪಟ್ಟಿತು: ಆಗ “ಕೂಡಲೇ ತಾನು ತನ್ನ ಮನೆಯವರೆಲ್ಲರೂ ಬಾಪ್ತಿಸ್ಮ ಮಾಡಿಸಿಕೊಂಡರು” (ಅಪೊಸ್ತಲರ ಕೃತ್ಯ 16:33).

ಹೀಗೆ ಇಲ್ಲಿಯವರಗೆ ನಂಬಿಕೆಯ, ಮಾನಸಾಂತರದ ಹಾಗೂ ಅರಿಕೆಯ ಅವಶ್ಯಕತೆಯನ್ನು ಸ್ಥಾಪಿಸಿದ್ದೇವೆ. ಈ ಪಾಠದಲ್ಲಿ ಕರ್ತನಿಗೆ ನಮ್ಮ ಪ್ರಾರಂಭದ ಪ್ರತಿಕ್ರಿಯೆಯು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವದು ಒಳಗೊಂಡಿರುವದನ್ನು ನೋಡುತ್ತೇವೆ. ನಂಬಿಕೆ, ಮಾನಸಾಂತರ ಮತ್ತು ಅರಿಕೆಯನ್ನು ಕುರಿತು ಹೆಚ್ಚು ವಾದವಿವಾದವಿಲ್ಲದಿದ್ದರೂ; ಅನೇಕ ವರ್ಷಗಳಿಂದ ಬಾಪ್ತಿಸ್ಮವನ್ನು ಕುರಿತು ಒಮ್ಮತವಿರುವದಿಲ್ಲ. ಅಂಥ ವಾದವಿವಾದವು ಹೊಸ ಒಡಂಬಡಿಕೆಯ ಸಮಯದಲ್ಲಿ ಇರಲಿಲ್ಲ. ಯೇಸುವನ್ನು ಹಿಂಬಾಲಿಸಲು ತೀರ್ಮಾನಿಸುವವರೆಲ್ಲರೂ ಯಾವುದೇ ಪ್ರಶ್ನೆಯಿಲ್ಲದೆ ಬಾಪ್ತಿಸ್ಮ ಹೊಂದಿದರು.

## ಬಾಪ್ತಿಸ್ಮ : ಅದು ಏನಾಗಿದೆ?

ನಾವು ಬಾಪ್ತಿಸ್ಮವನ್ನು ಚರ್ಚಿಸುವ ಮೊದಲು ಆ ಪದದ ಅರ್ಥ ಏನಾಗಿದೆಂಬುದನ್ನು ನಾವು ತಿಳಿದು ಕೊಳ್ಳುವ ಅಗತ್ಯವಿದೆ. *“Baptism”* ಎಂಬುದು ಗ್ರೀಕ ಪದದ ಅನುವಾದ. ಇದರ ಅರ್ಥ ವರ್ಷಗಳ ಹಿಂದೆ ಗ್ರೀಕ ಪದವನ್ನು ಭಾಷಾಂತರಿಸುವ

ಬದಲು, ಯಾರೋ ಒಬ್ಬರು ಅದನ್ನು ಇಂಗ್ಲೀಷ್ ಪದವಾಗಿ ಮಾಡಿದರು.[1] *"Baptism"* ಎಂಬ ಪದವು ಗ್ರೀಕಿನಲ್ಲಿ ಹೀಗೆ ಕಾಣುತ್ತದೆ:[2]

□□□□□□□□□□ (ಬಾಪ್ಟಿಸ್ಮೊಸ)

ಗ್ರೀಕ ಪದಕ್ಕೆ ಎರಡು ರೂಪಗಳಿವೆ: ಬಾಪ್ಟಿಸ್ಮೊಸ (ಮೇಲಿನ ರೂಪ) ಮತ್ತು ಬಾಪ್ಟಿಸ್ಮಾ. ಕ್ರಿಯಾಪದ ರೂಪವು ಬಾಪ್ಟಿಡ್ಜೊ.[3] ಹಾಗೂ *"baptism"* ಮತ್ತು *"baptize"* ಎಂಬ ಪದಗಳಿಗೆ ಇವು ಎಷ್ಟು ಒಂದೇಯಾಗಿವೆ ಎಂಬುದನ್ನು ನೀವು ನೋಡಬಹುದು.

*"Baptize"* ಎಂಬ ಪದದ ಅರ್ಥವೇನು? ಈ ಪದವನ್ನು ಇಂಗ್ಲೀಷ್ ಡಿಕ್ಷನರಿಯಲ್ಲಿ ನೀವು ನೋಡಿದರೆ ಹಲವಾರು ಅರ್ಥಗಳನ್ನು ನೀವು ಕಂಡು ಕೊಳ್ಳುವಿರಿ. ಆದರೆ ಇಂಗ್ಲೀಷ್ ಡಿಕ್ಷನರಿಗಳು ಬೈಬಲಿನ ಅರ್ಥವನ್ನಲ್ಲ ಆದರೆ ಇಂದಿನ ಉಪಯೋಗವನ್ನು ಕೊಡುವವೆಂದು ಮನಸ್ಸಿನಲ್ಲಿ ಇಟ್ಟುಕೊಳ್ಳರಿ. ಲೆಕ್ಸಿಕನ್ ಎಂದು ಕರೆಯಲ್ಪಡುವ ಗ್ರೀಕ ಡಿಕ್ಶ್ನರಿಯಲ್ಲಿ ಬಾಪ್ಟಿಡ್ಜೊದ ಅರ್ಥವನ್ನು ನೀವು ಕಂಡುಕೊಳ್ಳ ಬಹುದು. ಬ್ಯಾಗ್‌ಸ್ಟರ್ ಅವರ *Analytical Greek Lexcion*ದಲ್ಲಿ ನೀವು ನೋಡಿದರೆ, ಬಾಪ್ಟಿಡ್ಜೊದ ಮೂಲವು ಬಾಪ್ಟೊ ಎಂದು ನೋಡುವಿರಿ. ಈ ಪದಗಳ ಸಮೂಹದ ಮೇಲೆ ನಿಮಗೆ ಕೊಡಲ್ಪಡುವ ಮಾಹಿತಿಯ ತಿರುಳು ಇಲ್ಲಿರುವುದು:

*bapto* (ಬಾಪ್ಟೊ), ... ಅದ್ದು (ಮುಳುಗಿಸು) ...
*baptizo* (ಬಾಪ್ಟಿಡ್ಜೊ), ... ಅದ್ದುವುದಕ್ಕೆ, ಮುಳಗಿಸುವದಕ್ಕೆ...
*baptisma* (ಬಾಪ್ಟಿಸ್ಮಾ), ... ಮುಳುಗಿಸಿ ಏಳುಸುವಿಕೆ ...
*baptismos* (ಬಾಪ್ಟಿಸ್ಮೊಸ್), ... ಅದ್ದುವ ಇಲ್ಲವೇ ಮುಳುಗೇಳಿಸುವ ಒಂದು ಕಾರ್ಯ ...[4]

"ಬಾಪಟ್ಯಜ್" ಅಂದರೆ "ಮುಳುಗಿಸು," ಹಾಗೂ "ಬಾಪ್ಟಿಜಮ್" ಅಂದರೆ "ಮುಳುಗುವಿಕೆ." "ಮಾನಸಾಂತರ ಪಟ್ಟು ನಿಮ್ಮಲ್ಲಿ ಪ್ರತಿಯೊಬ್ಬರು ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಿರಿ (ಮುಳುಗೇಳಿಸಲ್ಪಡಿರಿ)" ಎಂದು ಅಕ್ಷರಶಃ ವಾಗಿ ಪೇತ್ರನು ತನ್ನ ಕೇಳುಗರಿಗೆ ಹೇಳಿದನು. "ಎದ್ದು, ಬಾಪ್ತಿಸ್ಮ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" ಎಂದು ಅನನೀಯನು ಸೌಲನಿಗೆ ಅಕ್ಷರಶಃವಾಗಿ ಹೇಳಿದನು.

"ಬಾಪ್ಟಿಜಮ್" ಎಂಬ ಪದವು ಮುಳುಗೇಳಿಸುವಿಕೆಯು ಆಗಬೇಕಾದ ಮೂಲ ವಸ್ತುವನ್ನು ಸೂಚಿಸುವದಿಲ್ಲ. ಯೇಸುವು ಶ್ರಮೆಯಲ್ಲಿ ಬಾಪ್ತಿಸ್ಮ ಹೊಂದಿದನು (ಮುಳುಗೇಳುಸಲ್ಪಟ್ಟನು) (ಮಾರ್ಕ 10:38, 39; ಲೂಕ 12:50 ನೋಡಿರಿ). ಅಪೊಸ್ತಲರು ಪರಿಶುದ್ಧಾತ್ಮ ಬಲದಲ್ಲಿ ಬಾಪ್ತಿಸ್ಮ ಹೊಂದಿದರು (ಮುಳುಗೇಳಿಸಲ್ಪಟ್ಟರು) (ಮತ್ತಾಯ 3:11; ಅಪೊಸ್ತಲರ ಕೃತ್ಯ 1:5; 2:1-4). ನಾವು ಅಧ್ಯಯನ ಮಾಡುವ ಬಾಪ್ತಿಸ್ಮವು (ಅಪೊಸ್ತಲರ ಕೃತ್ಯ 8:36-38; 10:47, 48ರಲ್ಲಿ ತೋರಿಸಲ್ಪಟ್ಟಂತೆ) ನೀರಿನಲ್ಲಿ ಮುಳುಗೇಳಿಸುವಂಥದ್ದು ಆಗಿದೆ.

ಬಾಪ್ತಿಸ್ಮದ ಮೂಲ ವಿವರಣೆಯನ್ನು - ಮುಳುಗೇಳಿಸುವಿಕೆಯನ್ನು ಮನಸ್ಸಿನಲ್ಲಿ ಇಟ್ಟು ಕೊಂಡಿರ್ರಿ. ನಾವು ನಮ್ಮ ಅಧ್ಯಯನದಲ್ಲಿ ಮುಂದುವರಿದಂತೆ ಅದು ಬಹಳ

ಗಲಿಬಿಯನ್ನು ತಡೆಹಿಡಿಯುವುದು.

ಈ ಪಾಠದಲ್ಲಿಯೂ ಮುಂದಿನ ಪಾಠದಲ್ಲಿಯೂ ನಾವು ಮೂರು ಪ್ರಶ್ನೆಗಳನ್ನು ಕೇಳುವೆವು: "ಒಬ್ಬನು ಯಾಕೆ ಬಾಪ್ತಿಸ್ಮ ಹೊಂದಬೇಕು?"; "ಒಬ್ಬನು ಹೇಗೆ ಬಾಪ್ತಿಸ್ಮ ಹೊಂದಬೇಕು?"; ಹಾಗೂ "ಯಾರು ಬಾಪ್ತಿಸ್ಮ ಹೊಂದಬೇಕು?" "ಯಾಕೆ?" ಎಂಬುದರೊಂದಿಗೆ ಪ್ರಾರಂಭಿಸೋಣ.

## ಯೇಸುವಿನ ಆದೇಶಗಳು ಕೊಡಲ್ಪಟ್ಟಿವೆ (ಮಾರ್ಕ 16)

ಯೇಸುವು ತನ್ನ ಶಿಷ್ಯರಿಗೆ ಮಹಾ ಆಜ್ಞೆಯನ್ನು ಕೊಡುವಾಗ, ಹೀಗೆ ಹೇಳಿದನು:

> ಆದ್ದರಿಂದ ನೀವು ಹೋಗಿ ಸಮಸ್ತ ಜನರನ್ನು ಶಿಷ್ಯರನ್ನಾಗಿ ಮಾಡಿರಿ;[5] ಅವರಿಗೆ ತಂದೆಯ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿ, ನಾನು ನಿಮಗೆ ಆಜ್ಞಾಪಿಸಿದ್ದೆಲ್ಲವನ್ನು ಕೈಕೊಳ್ಳುವ ಹಾಗೆ ಅವರಿಗೆ ಉಪದೇಶ ಮಾಡಿರಿ. ಇಗೋ, ನಾನು ಯುಗದ ಸಮಾಪ್ತಿಯವರೆಗೂ ಸದಾಕಾಲ ನಿಮ್ಮ ಸಂಗಡ ಇದ್ದೇನೆ (ಮತ್ತಾಯ 28:19, 20).

### ಯೇಸುವಿನ ಏರ್ಪಾಡು

ಮಾರ್ಕನು ದಾಖಲೆ ಮಾಡಿದ ಮಹಾ ಆಜ್ಞೆಯು ಹೀಗಿರುವುದು: "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ಬಾಪ್ತಿಸ್ಮ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:15, 16).[6] "ನಂಬುವವನು ಮತ್ತು ಬಾಪ್ತಿಸ್ಮ ಹೊಂದುವವನು ರಕ್ಷಿಸಲ್ಪಡುವನು; ಆದರೆ ನಂಬದೇ ಇರುವವನು ಖಂಡಿಸಲ್ಪಡುವನು" (ವ. 16) ಎಂದು KJV ಹೇಳುತ್ತದೆ. ಯೇಸು ಇದಕ್ಕಿಂತ ಸರಳ ವಾಗಿ ಮಾಡಲಿಕ್ಕಾಗಲಿಲ್ಲ: ನಾವು ರಕ್ಷಿಸಲ್ಪಡಲು ಬಯಸಿದರೆ, ನಾವು ನಂಬತಕ್ಕದ್ದು, ಹಾಗೂ ಬಾಪ್ತಿಸ್ಮ ಹೊಂದತಕ್ಕದ್ದು.

ಬಾಪ್ತಿಸ್ಮಕ್ಕೆ ವಿರುದ್ಧವಾದ ಅಭಿಪ್ರಾಯವಿರುವ ಒಬ್ಬ ಮನುಷ್ಯನೊಂದಿಗೆ ಒಂದು ಸಲ ಅಧ್ಯಯನ ಮಾಡುತ್ತಿದ್ದೆನು. ಬಾಪ್ತಿಸ್ಮದ ಮೇಲಿನ ವಚನೆಗಳನ್ನು ನೋಡಿದೆವು. ಆದರೆ ಅವುಗಳಲ್ಲಿಯ ಸರಳ ಬೋಧನೆಯನ್ನು ಸ್ವೀಕರಿಸಲು ಅವನು ಒಪ್ಪಿಕೊಳ್ಳ ಲಿಲ್ಲ. ಅಂತಿಮವಾಗಿ, ಅವನಿಗೆ, "ಬಾಪ್ತಿಸ್ಮವು ರಕ್ಷಣೆಗೆ ಅತ್ಯವಶ್ಯವಾದದ್ದು ಎಂದು ಬೋಧಿಸಲು ಕರ್ತನು ಅಪೇಕ್ಷಿಸಿದರೆ ಆತನು ಅದನ್ನು ಹೆಚ್ಚು ಸ್ಪಷ್ಟವಾಗಿ ಹೇಗೆ ಪ್ರಕಟಿಸ ಬಹುದಿತ್ತು?" ಎಂದು ಕೇಳಿದೆನು. ಸ್ವಲ್ಪ ಸಮಯ ಅವನು ಯೋಚಿಸಿ, "ಬಾಪ್ತಿಸ್ಮವು ಅವಶ್ಯವಾಗಿದ್ದರೆ, ಕರ್ತನು, ನಂಬುವವನು ಮತ್ತು ಬಾಪ್ತಿಸ್ಮ ಹೊಂದುವವನು ರಕ್ಷಿಸಲ್ಪ ಡುವನು" ಎಂದು ಕರ್ತನು ಹೇಳಬಹುದಿತ್ತು ಎಂದು ನಾನು ಯೋಚಿಸುತ್ತೇನೆ ಎಂದು ಹೇಳಿದನು. ಅವನು ಎಲ್ಲಾ ಕಾರ್ಯಾಚರಣೆಯ ಉದ್ದೇಶಗಳಿಗಾಗಿ ಮಾರ್ಕ 16:16ನ್ನು ಉಲ್ಲೇಖಿಸಿದನೆಂದು ಕಂಡುಕೊಳ್ಳುವಾಗ ಅವನು ಆಶ್ಚರ್ಯಭರಿತನಾದನು.

ಮಾರ್ಕ 16:16 ಸ್ಪಷ್ಟವಾಗಿದೆ. ಆದರೆ ಯಾವಾಗಲಾದರೊಮ್ಮೆ ನಾನು ಈ ಆಕ್ಷೇಪಣೆ ಯನ್ನು ಕೇಳುತ್ತೇನೆ: "ವಚನದ ಕೊನೆಯ ಭಾಗವು - ನಂಬದೆಯಿರುವವನು ಮತ್ತು ಬಾಪ್ತಿಸ್ಮ ಹೊಂದದವನು ಖಂಡಿಸಲ್ಪಡುವನು ಎಂದು ಹೇಳುವದಿಲ್ಲ." ಆ ವಾದಕ್ಕೆ ನನ್ನ ಉತ್ತರ ಇಲ್ಲಿದೆ:

ವಚನದ ಕೊನೆಯ ಭಾಗದಲ್ಲಿ ಬಾಪ್ತಿಸ್ಮದ ಬಗ್ಗೆ ಹೇಳುವುದು ಪುನರಾವರ್ತನೆಯಾಗುತ್ತಿತ್ತು.

ಇದನ್ನು ಯೋಚಿಸಿರಿ: 16ನೆಯ ವಚನದ ಪ್ರಥಮ ಭಾಗದಲ್ಲಿ ಬಾಪ್ತಿಸ್ಮಕ್ಕಿಂತ ಮೊದಲು ನಂಬಿಕೆ ಬರುತ್ತದೆ. ಕರ್ತನಿಗೆ ನಾವು ಮಾಡುವ ಎಲ್ಲದಕ್ಕೂ ವಿಶ್ವಾಸವು ಅಸ್ತಿವಾರವಾಗಿದೆ. ಯೇಸುವಿನಲ್ಲಿ ನಂಬಿಕೆಯಿಲ್ಲದೆ ಒಬ್ಬನು ಮಾನಸಾಂತರ ಪಡಲಾರನು ಇಲ್ಲವೇ ಅರಿಕೆ ಮಾಡಲಾರನು. ಹಾಗೆಯೇ ಯೇಸುವಿನಲ್ಲಿ ನಂಬಿಕೆಯಿಲ್ಲದೆ ಒಬ್ಬನು ಬೈಬಲಾನುಸಾರವಾಗಿ ಬಾಪ್ತಿಸ್ಮ ಹೊಂದಲಾರನು. ವಚನ 16ರ ಕೊನೆಯ ಭಾಗವು ಮಾಡುವಂತೆ - ವಿಶ್ವಾಸವನ್ನು ತೆಗೆದು ಹಾಕುವುದು-ತನ್ನಷ್ಟಕ್ಕೆ ತಾನೇ ಬಾಪ್ತಿಸ್ಮವನ್ನೊಳಗೊಂಡ ವಿಶ್ವಾಸದ ಯಾವುದೇ ಪ್ರತಿಕ್ರಿಯೆಯನ್ನು ತೆಗೆದು ಹಾಕುವುದು. "ಮತ್ತು ಬಾಪ್ತಿಸ್ಮ ಹೊಂದದವನು" ಎಂಬುದನ್ನು ಕೂಡಿಸುವುದು ಅನಾವಶ್ಯಕವಾಗಿದೆ.

ಈ ವಿಚಾರವನ್ನು ಉದಾಹರಿಸಲು, ಒಂದು ಕೋಣೆಯನ್ನು ಕಟ್ಟಲು ನಿಮ್ಮನ್ನು ಜೀತಕ್ಕಿಟ್ಟು ಕೊಂಡನೆಂದು ಕಲ್ಪಿಸಿರಿ. "ನೀವು ಒಂದು ಕೋಣೆಯನ್ನು ಕಟ್ಟಿ, ಕೆಂಪು ಬಣ್ಣ ಹಚ್ಚಿದರೆ ನಿಮಗೆ ಇಪ್ಪತ್ತು ಸಾವಿರ ರೂಪಾಯಿ ಕೊಡುವೆನು" ಎಂದು ನಿಮಗೆ ಹೇಳುವೆನು. ನೀವು ಇಪ್ಪತ್ತು ಸಾವಿರ ರೂಪಾಯಿ ಪಡೆದುಕೊಳ್ಳ ಬೇಕಾದರೆ ಎರಡು ಸಂಗತಿಗಳನ್ನು ಮಾಡತಕ್ಕದ್ದು: (1) ಕೋಣೆಯನ್ನು ಕಟ್ಟಬೇಕು ಮತ್ತು (2) ಅದಕ್ಕೆ ಕೆಂಪು ಬಣ್ಣ ಹಚ್ಚಬೇಕು ಎಂದು ನೀವು ಅರ್ಥ ಮಾಡಿಕೊಳ್ಳುವಿರಿ. "ಆದರೆ ನೀವು ಕೋಣೆ ಕಟ್ಟದಿದ್ದರೆ, ನಾನು ನಿಮಗೆ ಇಪ್ಪತ್ತು ಸಾವಿರ ರೂಪಾಯಿ ಕೊಡುವದಿಲ್ಲ" ಎಂದು ಹೇಳಿದರೆ ಏನಾಗುವುದು? ಈ ಎರಡನೆಯ ಹೇಳಿಕೆಯಿಂದ ಕೋಣೆಯನ್ನು ಕೆಂಪು ಬಣ್ಣದಿಂದ ಹಚ್ಚುವ ಅಗತ್ಯವಿಲ್ಲವೆಂದು ತಿಳಿದುಕೊಳ್ಳುವಿರೋ? ಇಲ್ಲ, ಕೋಣೆಯನ್ನು ಕಟ್ಟದಿದ್ದರೆ ಕೋಣೆಗೆ ಬಣ್ಣ ಹಚ್ಚುವುದು ತನ್ನಿಂದ ತಾನೇ ರದ್ದಾಗುವುದು ಎಂದು ನೀವು ಅರ್ಥ ಮಾಡಿಕೊಳ್ಳುವಿರಿ. ಅಲ್ಲಿ ಇಲ್ಲದೇ ಇರುವ ಕೋಣೆಗೆ ಬಣ್ಣ ಹಚ್ಚುವುದು ಅಸಾಧ್ಯ ವಾದದ್ದು. ಹೀಗಿರುವಾಗ, ಮೊದಲು ಒಬ್ಬನಿಗೆ ಯೇಸುವಿನಲ್ಲಿ ನಂಬಿಕೆ ಯಿಲ್ಲದಿದ್ದರೆ ಬೈಬಲಾನುಸಾರವಾಗಿ ಬಾಪ್ತಿಸ್ಮ ಹೊಂದುವುದು ಅಸಾಧ್ಯವಾಗುತ್ತದೆ.

ಪುನಃ ಮಾರ್ಕ 16:15, 16ರ ಸರಳತೆಯ ಕಡೆಗೆ ನೋಡಿರಿ. ದೇವರ ಯೋಜ ನೆಯು ಹಂತ ಹಂತವಾಗಿ ಕೊಡಲ್ಪಟ್ಟಿದೆ:

(1) ಪ್ರಸಂಗ (ಬೋಧನೆ)
(2) ನಂಬಿಕೆ
(3) ಬಾಪ್ತಿಸ್ಮ
(4) ರಕ್ಷಣೆ

**ಜನರಿಂದ ಪುನಃ ಏರ್ಪಾಟುಗಳು**

ದುರದೃಷ್ಟದಿಂದ, ಮಾನವ ಜನಾಂಗವು ಕರ್ತನ ಸರಳತೆಯನ್ನು ತನ್ನಷ್ಟಕ್ಕೆ ಬಿಟ್ಟುಬಿಡುವದರಲ್ಲಿ ತೃಪ್ತಿಯಿಂದಿರುವದಿಲ್ಲ (2 ಕೊರಿಂಥ 11:3 ಓದಲಿ). ಹಿಂದನ ಒಂದು ಪಾಠದಲ್ಲಿ ಶಿಶುಗಳು ಆದಾಮನ ಪಾಪದ ಅಪರಾಧದ ದೋಷದೊಂದಿಗೆ ಜನಿಸುತ್ತವೆಂಬ ಬೋಧನೆಯ ಬಗ್ಗೆ ಚರ್ಚಿಸಿದ್ದೇವೆ. ಆ ಅಪರಾಧವನ್ನು ತೊಳೆಯಲು ಬಾಪ್ತಿಸ್ಮವು[7] ಅವಶ್ಯ ಎಂದು ಕೆಲವರು ಒತ್ತಿ ಹೇಳುತ್ತಾರೆ. ಅವರ ಸಿದ್ಧಾಂತದ ಪ್ರಕಾರ ಬಾಪ್ತಿಸ್ಮ ವಿಲ್ಲದ ಶಿಶು ಮರಣ ಹೊಂದಿದರೆ ಅದು ಪರಲೋಕಕ್ಕೆ ಹೋಗುವದಿಲ್ಲ.[8] "ಶಿಶು ಬಾಪ್ತಿಸ್ಮ" ಒಪ್ಪಿಕೊಳ್ಳುವವರು ಬಾಪ್ತಿಸ್ಮ ಹೊಂದಿದ

ಮಗುವು ಒಂದು ವಯಸ್ಸನ್ನು ತಲುಪುವಾಗ, ಅವನಿಗೆ ಬೋಧನೆಕೊಟ್ಟು "ದೃಢೀಕರಿಸಲ್ಪಡಬೇಕು"[9] ಎಂದು ಹೇಳುತ್ತಾರೆ. ಈ ಕೆಳಗಿನಂತೆ ಅವರು ಕರ್ತನ ಕ್ರಮವನ್ನು ಪುನಃ ಏರ್ಪಾಟು ಮಾಡುತ್ತಾರೆ:

(1) ಬಾಪ್ತಿಸ್ಮ
(2) ರಕ್ಷಣೆ
(3) ಬೋಧನೆ
(4) ನಂಬಿಕೆ

ಸ್ಪಷ್ಟವಾಗಿ, ಈ ವ್ಯವಸ್ಥಾಪನೆಯು ಕರ್ತನ ವ್ಯವಸ್ಥಾಪನೆಯಾಗಿರುವದಿಲ್ಲ.

| ಯೇಸು | ಜನರು (ಎ) |
|---|---|
| (1) ಪ್ರಸಂಗ (ಬೋಧನೆ) | (1) ಬಾಪ್ತಿಸ್ಮ |
| (2) ನಂಬಿಕೆ | (2) ರಕ್ಷಣೆ |
| (3) ಬಾಪ್ತಿಸ್ಮ | (3) ಬೋಧನೆ |
| (4) ರಕ್ಷಣೆ | (4) ನಂಬಿಕೆ |

ಜಗತ್ತಿನ ಕೆಲವು ಭಾಗಗಳಲ್ಲಿ ನಾವು ಈಗಾಗಲೇ ಚರ್ಚಿಸಿದ ಇನ್ನೊಂದು ಸಿದ್ಧಾಂತವು ರೂಢಿಯಲ್ಲಿದೆ. "ಕೇವಲ ನಂಬಿಕೆ"ಯಿಂದ ರಕ್ಷಣೆಯ ಬೋಧನೆ. ಈ ದೃಷ್ಟಿಕೋನವನ್ನು ಇಟ್ಟಿಕೊಂಡಿರುವವರು ಒಬ್ಬನು ಯೇಸುವಿನಲ್ಲಿ ನಂಬಿಕೆಯಿಟ್ಟ ಕೂಡಲೇ ರಕ್ಷಿಸಲ್ಪಡುವರು ಎಂದು ಬೋಧಿಸುವರು.[10] ಬಾಪ್ತಿಸ್ಮ ಹೊಂದುವುದು ಒಳ್ಳೆಯದು. ಆದರೆ ನಿಜವಾಗಿ ಅವಶ್ಯವಾದದ್ದಲ್ಲ ಎಂದು ಅವರು ಬೋಧಿಸುವರು. ಹೀಗೆ ಅವರು ಪುನಃ ಸ್ಥಾಪಿಸುವುದು ಈ ರೀತಿ ಕಾಣುವುದು.

(1) ಬೋಧನೆ
(2) ನಂಬಿಕೆ
(3) ರಕ್ಷಣೆ
(4) ಬಾಪ್ತಿಸ್ಮ

ಇನ್ನೊಮ್ಮೆ, ಇದು ಮಾರ್ಕ 16:15, 16ರಲ್ಲಿ ಯೇಸುವಿನಿಂದ ಕೊಡಲ್ಪಟ್ಟ ಕ್ರಮವನ್ನು ಬದಲಾಯಿಸುತ್ತದೆ:

| ಯೇಸು | ಜನರು (ಬಿ) |
|---|---|
| (1) ಪ್ರಸಂಗ (ಬೋಧನೆ) | (1) ಬೋಧನೆ |
| (2) ನಂಬಿಕೆ | (2) ನಂಬಿಕೆ |
| (3) ಬಾಪ್ತಿಸ್ಮ | (3) ರಕ್ಷಣೆ |
| (4) ರಕ್ಷಣೆ | (4) ಬಾಪ್ತಿಸ್ಮ |

# ಯೇಸುವಿನ ಆದೇಶಗಳು ಅನುಸರಿಸಲಪಟ್ಟದ್ದು

# (ಅಪೊಸ್ತಲರ ಕೃತ್ಯ 2)

ಇಂದು ಯೇಸುವಿನ ವ್ಯವಸ್ಥಾಪನೆಯ ಕ್ರಮವನ್ನು ಬದಲಾಯಿಸುವವರಿಗೆ ವಿರೋಧವಾಗಿ ಅಪೊಸ್ತಲರ ಕೃತ್ಯ 2 ಕ್ರಿಸ್ತನ ವ್ಯವಸ್ಥಾಪನೆಯನ್ನು ಸರಿಯಾಗಿ ಅನುಸರಿಸಿದ ಒಂದು ಉದಾಹರಣೆಯನ್ನು ಕೊಡುತ್ತದೆ.

**ಕಥೆಯ ಪ್ರಾರಂಭ**

ಅಪೊಸ್ತಲರ ಕೃತ್ಯ 2ರಲ್ಲಿ ಪೇತ್ರನು ಸುವಾರ್ತೆಯನ್ನು ಅದರ ಪೂರ್ಣತೆಯಲ್ಲಿ ಮೊದಲನೆಯ ಸಲ ಪ್ರಸಂಗಿಸಿದನು. ಅವನ ಪ್ರಸಂಗವು ಯೇಸುವಿನ ಮೇಲೆ ಕೇಂದ್ರೀಕರಿಸಲ್ಪಟ್ಟಿತ್ತು. ಅವನ ಪಾಠದ ಪರಮಾವಧಿಯು ಅಪೊಸ್ತಲರ ಕೃತ್ಯ 2:36 ರಲ್ಲಿದೆ: "ಆದುದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಕರ್ತನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಮನೆತನದವರಿಗೆ ರೂಢಿಯಾಗಿ ತಿಳಿದಿರಲಿ." ಯೆಹೂದ್ಯರು ಇದನ್ನು ಕೇಳಿದಾಗ, "ಅವರ ಹೃದಯದಲ್ಲಿ ಅಲಗು ನೆಟ್ಟಂತಾಗಿ, ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ, 'ಸಹೋದರರೇ, ನಾವೇನು ಮಾಡಬೇಕು?' " (ಅಪೊಸ್ತಲರ ಕೃತ್ಯ 2:37) ಎಂದು ಕೇಳಿದರು.

ಈ ವಿಷಯಕ್ಕೆ ಅಪೊಸ್ತಲರ ಕೃತ್ಯ 2 ಯೇಸವಿನಿಂದ ಮುಂದಿಡಲ್ಪಟ್ಟ ಕ್ರಮವನ್ನು ಅನುಸರಿಸಿದ್ದನ್ನು ಗಮನಿಸಿರಿ: (1) ಅಲ್ಲಿ ಪ್ರಸಂಗವಿತ್ತು, ಮತ್ತು (2) ಇದು ನಂಬಿಕೆಯನ್ನು ಹುಟ್ಟಿಸಿತು. ("ನಂಬು" ಎಂಬ ಪದವು ವಚನ 37ರಲ್ಲಿ ಕಾಣಿಸಿಕೊಳ್ಳುವದಿಲ್ಲ. ಆದರೆ ಕೇಳುಗರು ಪೇತ್ರನ ಸಂದೇಶವನ್ನು ನಂಬಿರದಿದ್ದರೆ, "ಹೃದಯದಲ್ಲಿ ಅಲಗು ನೆಟ್ಟಂತೆ" ಅವರಿಗಾಗುತ್ತಿರಲಿಲ್ಲ.)

ಪೇತ್ರನ ಪ್ರಸಂಗ ಕೇಳುತ್ತಿದ್ದವರು ತಮ್ಮ ರಕ್ಷಣೆಗಾಗಿ ದೇವರ ಯೋಜನೆಯಲ್ಲಿ ಮುಂದೇನು ಬರುವದೆಂದು ತಿಳಿಯಲು ಬಯಸಿದರು. ಪೇತ್ರನು ಯೇಸುವಿನ ವಿಧಾನವನ್ನು ತಿಳಿದಿದ್ದರೆ, ಅವನು ಅವರಿಗೆ ಏನು ಹೇಳುವನು? ಅವನು ಅವರಿಗೆ (3) ಬಾಪ್ತಿಸ್ಮ ಹೊಂದಿ ಕೊಳ್ಳಬೇಕು (4) ರಕ್ಷಿಸಲ್ಪಡಲಿಕ್ಕಾಗುವಂತೆ ಎಂದು ಹೇಳುವನು. ಅವನು ಹೇಳಿದ್ದೇನೋ ನೋಡೋಣ:

"ಪೇತ್ರನು ಅವರಿಗೆ - ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ನಿಮ್ಮಲ್ಲಿ ಪ್ರತಿಯೊಬ್ಬನು ಮಾನಸಾಂತರಪಟ್ಟು (3) ಯೇಸು ಕ್ರಿಸ್ತನ ನಾಮದಲ್ಲಿ ಬಾಪ್ತಿಸ್ಮ ಹೊಂದಿರಿ (4); ಆಗ ನೀವು ಪರಿಶುದ್ಧಾತ್ಮ ವರವನ್ನು ಹೊಂದುವಿರಿ" ಎಂದು ಹೇಳಿದನು (ಅಪೊಸ್ತಲರ ಕೃತ್ಯ 2:38). ("ಪಾಪಗಳ ಕ್ಷಮಾಪಣೆ" ಸ್ವೀಕರಿಸುವುದು ಆ ಪಾಪಗಳಿಂದ ರಕ್ಷಿಸುವದಕ್ಕೆ ಸಮಾನವಾಗಿದೆ.) ಪೇತ್ರನು ಯೇಸುವಿನ ಆದೇಶಗಳನ್ನು ಅನುಸರಿಸಿದನೆಂಬುದನ್ನು ನೋಡುತ್ತೇವೆ.

| ಯೇಸು | ಪೇತ್ರ |
|---|---|
| (1) ಪ್ರಸಂಗ (ಬೋಧನೆ) | (1) ಪ್ರಸಂಗ |
| (2) ನಂಬಿಕೆ | (2) ನಂಬಿಕೆ |
| (3) ಬಾಪ್ತಿಸ್ಮ | (3) ಬಾಪ್ತಿಸ್ಮ |
| (4) ರಕ್ಷಣೆ | (4) ರಕ್ಷಣೆ |

**ಕಥೆಯ ಉಳಿದ ಭಾಗ**

ಈಗ ಕಥೆಯ ಉಳಿದ ಭಾಗವನ್ನು ಮುಂದರಿಸೋಣ: ಮಾನಸಾಂತರ ಪಡಲು ಮತ್ತು ಬಾಪ್ತಿಸ್ಮ ಹೊಂದಲು ಪೇತ್ರನು ವಿಶ್ವಾಸಿಗಳಿಗೆ ಹೇಳಿದನಂತರ, ಕರ್ತನಿಗೆ ವಿಧೇಯರಾಗಲು ಅವರನ್ನು ಪ್ರೋತ್ಸಾಹಿಸಿದನು. "ಅ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ" (ಅಪೊಸ್ತಲರ ಕೃತ್ಯ 2:39). "ದೂರವಾಗಿರುವವರೆಲ್ಲರಿಗೂ" ಎಂಬುದು ಅನ್ಯಜನಾಂಗದವರಿಗೆ ಸಂಬಂಧಿಸಿದೆ. ಇದು ಎಲ್ಲಾ ಜನಾಂಗಗಳಿಗಾಗಿ ದೇವರ ಯೋಜನೆಯಾಗಿತ್ತು. ಇದರನಂತರ, "ಬೇರೆ ಅನೇಕವಾದ ಮಾತುಗಳಿಂದ ಅವನು ಖಂಡಿತವಾಗಿ ಸಾಕ್ಷಿ ನುಡಿದು - ವಕ್ರ ಬುದ್ಧಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ ಎಂದು ಅವರನ್ನು ಎಚ್ಚರಿಸಿದನು" (ಅಪೊಸ್ತಲರ ಕೃತ್ಯ 2:40) ಎಂದು ಓದುತ್ತೇವೆ.

"ಅವನ ಮಾತನ್ನು ಅಂಗೀಕರಿಸಿದವರು ಬಾಪ್ತಿಸ್ಮ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಸೇರಿಸಲ್ಪಟ್ಟರು" ಎಂದು ವಚನ 41 ಹೇಳುತ್ತದೆ. ಹೀಗೆ ಬಾಪ್ತಿಸ್ಮ ಹೊಂದಿದವರು ಮತ್ತು ಹೀಗೆ "ಸೇರಿಸಲ್ಪಟ್ಟವರು" ತಮ್ಮ ಪಾಪಗಳಿಂದ ರಕ್ಷಿಸಲ್ಪಟ್ಟರು. "ಪ್ರತಿ ದಿನ ರಕ್ಷಣೆ ಹೊಂದುತ್ತಿದ್ದವರನ್ನು ಕರ್ತನು ಅವರೊಂದಿಗೆ ಕೂಡಿಸುತ್ತಿದ್ದನು"ಎಂದು ವಚನ 47 ಹೇಳುತ್ತದೆ. "ಅವರೊಂದಿಗೆ" ಎಂಬುವುದು ರಕ್ಷಣೆ ಹೊಂದಿದವರೊಂದಿಗೆ ಎಂದರ್ಥ - ಬೇರೆ ಮಾತುಗಳಲ್ಲಿ, ರಕ್ಷಣೆ ಹೊಂದಿದ ದೇಹವೆಂಬ ಸಭೆಯೊಳಗೆ (ಎಫೆಸ 5:23, 25). "ರಕ್ಷಿಸಲ್ಪಟ್ಟವರನ್ನು ಕರ್ತನು ಸಭೆಗೆ ದಿನಾಲೂ ಕೂಡಿಸುತ್ತಿದ್ದನು" ಎಂದು KJVಯಲ್ಲಿದೆ.

"ಅವರೊಂದಿಗೆ (ಅವರ ಸಂಖ್ಯೆಯೊಂದಿಗೆ) ಕರ್ತನು ದಿನಾಲೂ ಕೂಡಿಸುತ್ತಿದ್ದನು" ಎಂಬುದರ ಬಗ್ಗೆ ಯೋಚಿಸಿರಿ. "ಸಭೆಗೆ ಸೇರುವದನ್ನು" ಜನರು ಮಾಡುತ್ತಿದ್ದರು. ಮಾನವ ನಿರ್ಮಿತ ಸಭೆಗೆ ನೀವು ಸೇರಬಹುದು. ಆದರೆ ನೀವು ಕರ್ತನ ಸಭೆಯನ್ನು ಸೇರಲಾರಿರಿ. "ಸೇರುವದರಲ್ಲಿ" ಹಾಗೂ "ಕೂಡಿಸಲ್ಪಡವದರಲ್ಲಿ" ಭಿನ್ನತೆಯು ಮಹತ್ವದ್ದು; ಒಬ್ಬ ವ್ಯಕ್ತಿಯು ಒಂದು ಸಂಸ್ಥೆಯನ್ನು ಸೇರಿಕೊಳ್ಳುವಾಗ, ಅದು ಅವನು ಮಾಡುವಂಥದ್ದಾಗಿದೆ. ಅವನು ಒಂದು ಸಂಸ್ಥೆಗೆ ಸೇರಿಸಲ್ಪಡುವಾಗ, ಅವನಿಗಾಗಿ ಮಾಡಿದಂಥದ್ದಾಗುತ್ತದೆ. ಯಾರೂ ರಕ್ಷಣೆಯನ್ನು ಸಂಪಾದಿಸಿ ಕೊಳ್ಳದವರಾಗಿದ್ದುದರಿಂದ, ರಕ್ಷಿಸಲ್ಪಟ್ಟ ಮಂಡಳಿಯನ್ನು ಯಾರೂ ಸೇರಲಾರರು. ಕರ್ತನ ಕೃಪೆಯಿಂದಲೂ ದಯೆಯಿಂದಲೂ ರಕ್ಷಿಸಲ್ಪಟ್ಟವರು, ಕರ್ತನ ಸಭೆಯ ಸದಸ್ಯರು ಕರ್ತನಿಂದ ಕೂಡಿಸಲ್ಪಡತಕ್ಕದು.

ಹೆಚ್ಚಾದ ಸಭಾ ಪಂಗಡಗಳಲ್ಲಿ ರಕ್ಷಿಸಲ್ಪಡುವುದು ಹಾಗೂ ಸಭೆಯ ಸದಸ್ಯನಾಗುವುದು ಎರಡೂ ಭಿನ್ನವಾದ ಕಾರ್ಯಗಳಾಗಿ ಯೋಚಿಸಲ್ಪಟ್ಟಿವೆ. ಇದು ಕರ್ತನ ಸಭೆಯ ಬಗ್ಗೆ ಸತ್ಯವಾಗಿರುವದಿಲ್ಲ. ವ್ಯಕ್ತಿಯನ್ನು ರಕ್ಷಿಸುವಂಥದ್ದು ಅವನನ್ನು ಸಭೆಯ ಸದಸ್ಯನನ್ನಾಗಿ ಮಾಡುವುದು; ಅವನನ್ನು ಸಭೆಯ ಸದಸ್ಯನನ್ನಾಗಿ ಮಾಡುವಂಥದ್ದು ಅವನನ್ನು ರಕ್ಷಿಸುವುದು. ರಕ್ಷಿಸಲ್ಪಡುವ ಪ್ರತಿಯೊಬ್ಬನನ್ನು ಕರ್ತನು ತನ್ನ ಸಭೆಗೆ ಕೂಡಿಸಿಕೊಳ್ಳುವನು.

ವಿಚಾರಿಸುತ್ತಿರುವ ಪ್ರಶ್ನೆಗೆ ಹಿಂದಿರುಗಿ ಬಂದು ("ಯಾಕೆ ಬಾಪ್ತಿಸ್ಮ ಹೊಂದ ಬೇಕು"), ಅಪೊಸ್ತಲರ ಕೃತ್ಯ 2:38, 41 ಮತ್ತು 47ನ್ನು ಪುನರಾವಲೋಕಿಸಲು ಸಮಯ ತೆಗೆದು ಕೊಳ್ಳಿರಿ. ರಕ್ಷಿಸಲ್ಪಡಲು ಅಪೇಕ್ಷಿಸುವವನು ಕೆಲವೊಂದು ಸವಾಲುಗ ಳನ್ನು ಎದುರಿಸುವನು; ಭೂತಕಾಲದ ಪ್ರತಿಭಟನೆಗಳಿರುವದು: ಹಿಂದಿನ ಪಾಪಗಳ ಅಪರಾಧದಿಂದ ಉಪಶಮನ ಹೇಗೆ ಕಂಡುಕೊಳ್ಳಬಹುದು? ವರ್ತಮಾನ ಕಾಲದ

ಪ್ರತಿಭಟನೆಯೂ ಇರವುದು; ಪ್ರತಿದಿನ ಜೀವಿಸಲು ಬಲವನ್ನು ಎಲ್ಲಿ ಕಂಡು ಕೊಳ್ಳ ಬಹುದು? ಭವಿಷ್ಯದ ಸವಾಲು ಇರುವುದು: ಸಾಯುವ ವರೆಗೆ ನಂಬಿಗಸ್ಥಿಕೆಯಿಂದ ಜೀವಿಸಲು ಆಧಾರವನ್ನು ಎಲ್ಲಿ ಕಂಡುಕೊಳ್ಳಬಹುದು? ಬಾಪ್ತಿಸ್ಮದ ಹಂತದಲ್ಲಿ ಆ ಪ್ರತಿಭಟನೆಗಳನ್ನು ಎದುರಿಸಲು ಅವಶ್ಯವಾಗಿರುವ ಮೂಲನಿಧಿಗಳನ್ನು ದೇವರು ಅವರಿಗೆ ಕೊಡುವನು.

- ಭೂತಕಾಲದ ಸವಾಲು: ಬಾಪ್ತಿಸ್ಮ ಹೊಂದಿದವನು "(ತನ್ನ) ಪಾಪಗಳ ಕ್ಷಮಾಪಣೆಯನ್ನು" ಹೊಂದಿಕೊಳ್ಳುವನು. ಅಪರಾಧದ ಭಾರವು ತೆಗೆದು ಹಾಕಲ್ಪಡವುದು ಎಷ್ಟು ಆಶ್ಚರ್ಯಕರವಾದದ್ದಾಗಿದೆಯಲ್ಲವೇ!
- ವರ್ತಮಾನ ಕಾಲದ ಸವಾಲು: ಪ್ರತಿದಿನ ಜೀವಿಸಲು ಅವನಿಗೆ ಸಹಾಯ ಮಾಡುವ ದೇವರ ಆತ್ಮನನ್ನು ಅವನು ಹೊಂದಿಕೊಳ್ಳುವನು. ಬಾಪ್ತಿಸ್ಮ ಹೊಂದಿದ ಪ್ರತಿ ಯೊಬ್ಬನಿಗೆ ಪರಿಶುದ್ಧಾತ್ಮನು ವರವಾಗಿರುವನು. ಬಾಪ್ತಿಸ್ಮದ ಸಮಯದಲ್ಲಿ ಸ್ವೀಕರಿಸಲ್ಪಟ್ಟ ವರವಾಗಿದ್ದಾನೆ. ಈ ವರವು ಬಾಪ್ತಿಸ್ಮ ಹೊಂದಿದವನಿಗೆ ಅದ್ಭುತಗಳನ್ನು ಮಾಡುವ ಶಕ್ತಿಯನ್ನು ಕೊಡುವದಿಲ್ಲ. ಆದರೆ ಕ್ರೈಸ್ತ ಜೀವನ ಜೀವಿಸಲು ಅಗತ್ಯವಾಗಿರುವ ಬಲವನ್ನು ಅವನಿಗೆ ಕೊಡುವನು (ರೋಮಾಪುರ 8, ವಿಶೇಷವಾಗಿ ವಚನ 13 ಮತ್ತು ವಚನ 26 ನೋಡಲಿ.)[11]
- ಭವಿಷ್ಯದ ಸವಾಲು: ಅವನು ಯಾಂತ್ರಿಕವಾಗಿ ಕರ್ತನ "ಸಹಾಯಕ ಗುಂಪಿನ" ಅಂದರೆ ಸಭೆಯ ಭಾಗವಾಗುವನು. ಅವನು ಬಾಪ್ತಿಸ್ಮ ಹೊಂದಿದ ನಂತರ ತನ್ನ ಸ್ವಂತವಾದವನಾಗುವದಿಲ್ಲ. ಅವನನ್ನು ಪ್ರೀತಿಸುವ ಮತ್ತು ಅವನಿಗೆ ಸಹಾಯ ಮಾಡುವ ಕ್ರಿಸ್ತನಲ್ಲಿ ಅವನಿಗೆ ಸಹೋದರರೂ ಸಹೋದರಿಯರೂ ಇರುವರು.

ಬಾಪ್ತಿಸ್ಮವನ್ನು ಅಪೇಕ್ಷಿಸುವದಕ್ಕೆ ಈ ಆಶೀರ್ವಾದಗಳಲ್ಲಿ ಯಾವುದೇ ಒಂದು ಸಾಕಾದ ಕಾರಣವಾಗಿರುವುದು. ಆದರೆ ಕರ್ತನು ಎಲ್ಲಾ ಮೂರನ್ನೂ ಕೊಡುವನು.

## ಮುಕ್ತಾಯ

ಮುಂದಿನ ಪಾಠದಲ್ಲಿ "ಯಾಕೆ ಬಾಪ್ತಿಸ್ಮ ಹೊಂದಬೇಕು?" ಎಂಬ ಪ್ರಶ್ನೆಯ ನಮ್ಮ ಅಧ್ಯಯನವನ್ನು ಮುಗಿಸುವೆವು. ಹಾಗೂ "ಹೇಗೆ?" ಮತ್ತು "ಯಾರು?" ಎಂಬುದನ್ನು ಚರ್ಚಿಸುವೆವು. ಬೈಬಲಾನುಸಾರವಾಗಿ ಬಾಪ್ತಿಸ್ಮ ಹೊಂದುವವರ ಮೇಲೆ ದೇವರು ಸುರಿಸುವ ಆಶೀರ್ವಾದಗಳ ಬಗ್ಗೆ ಸ್ವಲ್ಪಸಮಯ ಯೋಚಿಸಿರಿ. ನಿಮಗೆ ಈ ಆಶೀರ್ವಾದಗಳು ಇರಬೇಕೆಂದು ಬಯಸುವಿರೋ?

ಟಿಪ್ಪಣಿಗಳು

[1]ಇದು ಗ್ರೀಕ ಪದದ ಒತ್ತಡವನ್ನು ತಪ್ಪಿಸಿಕೊಳ್ಳಲಿಕ್ಕೆ ಮಾಡಲ್ಪಟ್ಟಿರಬೇಕು: ಗ್ರೀಕ ಪದದ ಅರ್ಥ "ಮುಳುಗೇಳಿಸುವುದು," ಆದರೆ ಭಾಷಾಂತರಕಾರರು ಚಿಮುಕಿಸುವದನ್ನು ರೂಢಿಸುತ್ತಿದ್ದರು. [2]ನಮ್ಮ ಅಧ್ಯಯನಗಳಲ್ಲಿ ಕೆಲವು ಸರಳವಾದ ಗ್ರೀಕ ಪಾಠಗಳನ್ನು ಕೊಡುವೆನು. ಇದು ನಿಮಗೆ ಬಹಳ ಕಷ್ಟಕರವಾಗಿರುವದಿಲ್ಲವೆಂದು ನಿರೀಕ್ಷಿಸುತ್ತೇನೆ. [3]ಇದು "ಬಾಪ್ - ಟಿಡ್ - ಜೊ" ಎಂದು ಉಚ್ಚರಿಸಲ್ಪಡುತ್ತದೆ. [4]*The Analytical Greek Lexicon* (London: Samuel Bagster & Sons, 1971), 65. [5]KJVಯಲ್ಲಿ "ಎಲ್ಲಾ ಜನಾಂಗಗಳಿಗೆ ಬೋಧಿಸುವಿರಿ" ಎಂದಿದೆ. "ಶಿಷ್ಯ" ಎಂಬ ಪದದ ಅರ್ಥ "ಕಲಿಯುವವನು" ಎಂದರ್ಥ. ಒಬ್ಬ ಮನುಷ್ಯನಿಗೆ ಬೋಧಿಸುವದರಿಂದ ಅವನನ್ನು "ಶಿಷ್ಯ"ನನ್ನಾಗಿ ಮಾಡುವಿರಿ. [6]ಮಾರ್ಕ 16:15, 16ರ ಭಾಷಾಂತರಗಳು ಹೆಚ್ಚು ಕಡಿಮೆಯಿಂದ ಅದನ್ನು ನಾನು ಕೊಟ್ಟಂತೆ ಇರುವುದು. ಹೀಗಿದ್ದರೂ ಕೆಲವು ವಾಕ್ಯಗಳನ್ನು ಆವರಣದಲ್ಲಿಡುವವು. ಹಾಗೂ ಒಂದೆರಡು ಮಾರ್ಜಿನ್ ಟಿಪ್ಪಣಿಯಲ್ಲಿ ವಾಕ್ಯಗಳನ್ನು ಇಟ್ಟಿರುವೆವು. ಮಾರ್ಕ 16ರ ಅಂತ್ಯದ ನಿಶ್ಚಿತತೆಯನ್ನು ಕುರಿತು ವಾದವಿವಾದ ವಿರುವುದು ಇದಕ್ಕೆ ಕಾರಣ. ಮಾರ್ಕ 16:15, 16ರಲ್ಲಿ ಯೇಸುವು ಹೇಳಿದನೆಂದು ತಿಳಿದ ಮಾತುಗಳನ್ನು ಆತನು ಹೇಳಿದನೆಂದು ಹೆಚ್ಚಾದ ಪಂಡಿತರು ಒಪ್ಪಿಕೊಳ್ಳುತ್ತಾರೆ. [7]ಇದನ್ನು ಬೋಧಿಸುವ ಹೆಚ್ಚಾದವರು ನಿಜವಾಗಿಯೂ ಶಿಶುಗಳಿಗೆ ಬಾಪ್ತಿಸ್ಮ ಕೊಡುವದಿಲ್ಲ. ಅವರು ಶಿಶುಗಳನ್ನು ಮುಳುಗೇಳಿಸುವ ಬದಲು ಅವುಗಳ ಮೇಲೆ ನೀರನ್ನು ಚಿಮುಕಿಸುತ್ತಾರೆ. ಇಲ್ಲವೇ ಸುರಿಯತ್ತಾರೆ. ಈ ಆಚರಣೆಯನ್ನು "ಬಾಪ್ತಿಸ್ಮ" ಎಂದು ಕರೆಯುತ್ತಾರೆ. [8]ಇದು ಆಘಾತಕಾರಿ ವಿಚಾರವಾಗಿರುವದರಿಂದ, ಬಾಪ್ತಿಸ್ಮ ಹೊಂದದ ಶಿಶುಗಳ ಆತ್ಮಗಳು ಹೋಗಲು ನರಕದಷ್ಟು ಕೆಟ್ಟದ್ದಾಗಿರದ ಸ್ಥಳವನ್ನು ಹುಡುಕಿದ್ದಾರೆ. ಸಂಪೂರ್ಣವಾಗಿ ಸತ್ಯವೇದದಿಂದ ಹೊರಗಿರುವ ಈ ಸ್ಥಳವನ್ನು "ಲಿಂಬೊ" ಎಂದು ಕರೆಯುತ್ತಾರೆ. [9]"ದೃಢೀಕರಣದ" ಆಚರಣೆಯು ಸತ್ಯವೇದಕ್ಕೆ ಹೊರಗಿರುವ ಇನ್ನೊಂದು ಆಚರಣೆಯಾಗಿದೆ. ಸತ್ಯವೇದಕ್ಕೆ ಹೊರಗಿರುವ ತತ್ವಗಳೂ ಆಚಾರಗಳೂ ಹೆಚ್ಚಾಗುತ್ತಿರುವಂತೆ ಕಾಣುತ್ತದೆ. [10]ಕೆಲವು ಸಲ "ಪಾಪಿಯ ಪ್ರಾರ್ಥನೆ" ಎಂದು ಕರೆಯುವಂಥತ್ತದ್ದನ್ನು ಹೇಳುವಂತೆ ಕರೆಯಲ್ಪಡುತ್ತಾರೆ. ಅಂಥ ಪ್ರಾರ್ಥನೆ ಇಲ್ಲವೇ ತತ್ವವು ಸತ್ಯವೇದದಲ್ಲಿ ಕಂಡುಬರುವದಿಲ್ಲ.

[11]ಪವಿತ್ರಾತ್ಮನು ನಮಗೆ ಸಹಾಯ ಮಾಡುವನು ಎಂದು ಹೇಳುವುದು. ದೇವರು ನಮಗೆ ಸಹಾಯ ಮಾಡುವನು ಎಂದು ಹೇಳುವದಕ್ಕೆ ಸಮಾನವಾಗಿದೆ. ಪವಿತ್ರಾತ್ಮನ ಕಾರ್ಯದ ಬಗೆಗಿನ ವಿಷಯದ ಬಗ್ಗೆ ನಿಮಗೆ ಆಸಕ್ತಿಯಿದ್ದರೆ ಈ ಪುಸ್ತಕವನ್ನು ನಿಮಗೆ ಕೊಟ್ಟ ವ್ಯಕ್ತಿಗೆ ಹೇಳಿರಿ. ನಿಮ್ಮ ಪ್ರಶ್ನೆಗಳಿಗೆ ಉತ್ತರ ಕಂಡಕೊಳ್ಳಲು ನಿಮಗೆ ಸಹಾಯ ಮಾಡುವನು. ಆದರೆ ಈ ಮೂಲ ಅಧ್ಯಯನವು ಮುಗಿಯುವವರೆಗೆ ಕಾದಿರುವದನ್ನು ಅವನು ಬಯಸುಬಹುದು.

© 2009 Truth for Today